NWKRTC-PERS0GHM/1/2021-PERS

/26293/2022

# ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ ಹುಬ್ಬಳ್ಳಿ

ಸಂಖ್ಯೆ:ವಾಕರಸಾ/ಕೇಕ/ಹು/ಆಡಳಿತ/ಎ12/ 1733 /2022-23 ದಿನಾಂಕ : 29/09/2022

## ಸುತ್ತೋಲೆ ಸಂಖ್ಯೆ :97/2022

ವಿಷಯ : ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅತಿಥಿಗೃಹಗಳ ಬಾಡಿಗೆ ದರವನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ : 1) ವಾಕರಸಾ:ಕೇಕ:ಆಡಳಿತ:ಎ2:805 ದಿನಾಂಕ: 23-04-2004.
2) ವಾಕರಸಾ:ಕೇಕ:ಆಡಳಿತ:ಎ2:2628 ದಿನಾಂಕ: 10-10-2012.
3) ವಾಕರಸಾ:ಕೇಕ:ಆಡಳಿತ:ಎ2:1883 ದಿನಾಂಕ: 17-08-2013.
4) ವಾಕರಸಾ:ಕೇಕ:ಆಡಳಿತ:ಎ2:2022 ದಿನಾಂಕ: 04-09-2013.
5) ವಾಕರಸಾ:ಕೇಕ:ಆಡಳಿತ:ಎ2:2027 ದಿನಾಂಕ: 16-09-2015.

-*****-

ವಾ.ಕ.ರ.ಸಾ.ಸಂಸ್ಥೆಯಲ್ಲಿನ ಅತಿಥಿಗೃಹದ ವಾಸ್ತವ್ಯ ಶುಲ್ಕವನ್ನು ಉಲ್ಲೇಖಿತ 5 ರಲ್ಲಿನ ಆದೇಶದನುಸಾರ ಪರಿಷ್ಕರಿಸಲಾಗಿತ್ತು ಆದರೆ ಪ್ರಸ್ತುತ ಅತಿಥಿಗೃಹಗಳ ನಿರ್ವಹಣೆ ವೆಚ್ಚವು ದಿನೇ ದಿನೇ ಹೆಚ್ಚುತ್ತಿರುವುದರಿಂದ, ಸಂಸ್ಥೆಯ ಹುಬ್ಬಳ್ಳಿ ಮತ್ತು ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲಿನ ಅತಿಥಿಗೃಹಗಳ ಪ್ರತಿ ಹಾಸಿಗೆಯ ಮತ್ತು ಪ್ರತಿ ಕೊಠಡಿಯ' ದರಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿದೆ. ಸದರಿ ಪರಿಷ್ಕರಿಸಿದ ದರವು ಒಂದು ದಿನಕ್ಕೆ (24 ತಾಸುಗಳಿಗೆ) ಅನ್ವಯವಾಗುತ್ತದೆ.

update in website
20/10/22

| ಅತಿಥಿ ಗೃಹಗಳು | ವ್ಯವಸ್ಥೆ ವಿವರ | ಸಂಸ್ಥೆಯ ನೌಕರರು/ಅಧಿಕಾರಿಗಳಿಗೆ | ಸರ್ಕಾರದ ಅಧಿಕಾರಿಗಳಿಗೆ / ಸಂಸ್ಥೆಯ ನಿವೃತ್ತ ನೌಕರರು/ಅಧಿಕಾರಿಗಳಿಗೆ | ಖಾಸಗಿಯವರಿಗೆ |
|---|---|---|---|---|
| ಹುಬ್ಬಳ್ಳಿ | ಹವಾ ನಿಯಂತ್ರಿತ ಹಾಗೂ ಹೆಚ್ಚುವರಿ ಕೊಠಡಿ Suite No-1 Double Bed | Rs 500/- ಒಬ್ಬರಿಗೆ<br>Rs 700/- ಕೊಠಡಿಗೆ | Rs 700/- ಒಬ್ಬರಿಗೆ<br>Rs 900/- ಕೊಠಡಿಗೆ | Not Allowed |
| | ಹವಾ ನಿಯಂತ್ರಿತ ಕೊಠಡಿ Suite No-2 & 3 Double Bed | Rs 200/- ಒಬ್ಬರಿಗೆ<br>Rs 300/- ಕೊಠಡಿಗೆ | Rs 400/- ಒಬ್ಬರಿಗೆ<br>Rs 500/- ಕೊಠಡಿಗೆ | Rs 1000/- ಒಬ್ಬರಿಗೆ<br>Rs 1500/- ಕೊಠಡಿಗೆ |
| ಹುಬ್ಬಳ್ಳಿ ಮತ್ತು ಬೆಳಗಾವಿ | ಅನೆಕ್ಸರ್ಸ್ (Annexure Rooms 1,2,3,4 With attached toilet) Double Bed | Rs 125/- ಒಬ್ಬರಿಗೆ<br>Rs 200/- ಕೊಠಡಿಗೆ | Rs 200/- ಒಬ್ಬರಿಗೆ<br>Rs 250/- ಕೊಠಡಿಗೆ | Rs 700/- ಕೊಠಡಿಗೆ |
| | ಸಾಮಾನ್ಯ ಕೊಠಡಿ 4,5 (With attached toilet) Double Bed | Rs 100/- ಒಬ್ಬರಿಗೆ<br>Rs 175/- ಕೊಠಡಿಗೆ | Rs 300/- ಒಬ್ಬರಿಗೆ<br>Rs 400/- ಕೊಠಡಿಗೆ | Rs 600/- ಕೊಠಡಿಗೆ |
| | ಸಾಮಾನ್ಯ ಕೊಠಡಿ 6,7 Double Bed | Rs 50/- ಒಬ್ಬರಿಗೆ | - | Rs 200/- ಕೊಠಡಿಗೆ |

(ಈ ಮೇಲಿನ ದರಗಳು ಕಾಲಕಾಲಕ್ಕೆ ಅನ್ವಯವಾಗುವ ಸೇವಾ ತೆರಿಗೆಗಳನ್ನು ಸಹ ಒಳಗೊಂಡಿರುತ್ತದೆ.)

951
20/10/22

C:\My Documents\A2\Guest House office order.doc

Kiran

**ಸೂಚನೆಗಳು:**

- ಸಂಸ್ಥೆಯ ಅಧಿಕಾರಿ/ಸಿಬ್ಬಂದಿಗಳು ಕೇಂದ್ರ ಕಛೇರಿಗೆ ವರ್ಗಾವಣೆಗೊಂಡು ವಸತಿ ವ್ಯವಸ್ಥೆ ಮಾಡಿಕೊಳ್ಳುವವರೆಗೆ ಅನೆಕ್ಷರ್ಸ್ ಕೊಠಡಿಗಳಲ್ಲಿ ಉಳಿದುಕೊಳ್ಳಬಹುದಾಗಿರುತ್ತದೆ. ಆದರೆ ಈ ರೀತಿ ಉಳಿದುಕೊಳ್ಳುವ ಯಾವುದೇ ಅಧಿಕಾರಿ / ಸಿಬ್ಬಂದಿಗಳು ಭಾನುವಾರ ಹಾಗೂ ಇತರೇ ರಜೆಯ ಕಾರಣ ವಾಸ್ತವ್ಯ ಇರದ ದಿನಗಳನ್ನೂ ಸಹ ಒಳಗೊಂಡಂತೆ (Inclusive of Sundays & Other holidays) ಒಟ್ಟು 30 ದಿನಗಳಿಗಿಂತ ಹೆಚ್ಚಿನ ಅವಧಿಗೆ ಉಳಿದುಕೊಳ್ಳಲು ಅವಕಾಶವಿರುವುದಿಲ್ಲ. ಆದಾಗ್ಯೂ ವಾಸ್ತವ್ಯ ಮುಂದುವರೆಸಿದಲ್ಲಿ ಅವರ ವೇತನದಿಂದ ಮನೆ ಬಾಡಿಗೆ ಭತ್ಯೆಯನ್ನು ಅತಿಥಿಗೃಹದ ಬಾಡಿಗೆ ರೂಪದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಕಡಿತಗೊಳಿಸಲಾಗುವುದು.
- ಅಧಿಕಾರಿ / ಸಿಬ್ಬಂದಿಗಳು ಅತಿಥಿಗೃಹದ ಅನೆಕ್ಷರ್ಸ್ ಕೊಠಡಿಗಳಲ್ಲಿ ದೀರ್ಘಾವಧಿ ಅವಧಿಗೆ ಉಳಿದುಕೊಳ್ಳಲು ಇಚ್ಚಿಸಿದಲ್ಲಿ, ಈ ರೀತಿ ಕೊಠಡಿಯನ್ನು ಕಡ್ಡಾಯವಾಗಿ ಹಂಚಿಕೆ ಆಧಾರದ (Sharing Basis only) ಮೇಲೆಯೇ ಅನೆಕ್ಷರ್ಸ್ ಕೊಠಡಿಗೆ ಪ್ರತಿ ದಿನಕ್ಕೆ ನಿಗದಿಪಡಿಸಿದ ದರ ರೂ.200/- ರಂತೆ, ಭಾನುವಾರ ಹಾಗೂ ಇತರೇ ರಜೆಯ ಕಾರಣ ವಾಸ್ತವ್ಯ ಇರದ ದಿನಗಳನ್ನೂ ಸಹ ಒಳಗೊಂಡಂತೆ (Inclusive of Sunday & Other Holidays) ಪ್ರತಿ ಒಬ್ಬರಿಗೆ ಮಾಸಿಕ ಮೊತ್ತ ರೂ.6,000/- ಹಾಗೂ ಹವಾ ನಿಯಂತ್ರಿತ (Suite No-2,3) ಕೊಠಡಿಗೆ ಪ್ರತಿ ಒಬ್ಬರಿಗೆ ಮಾಸಿಕ ಮೊತ್ತ ರೂ.9000/- ಬಾಡಿಗೆ ಆಧಾರದ ಮೇಲೆ ನೀಡಲಾಗುವುದು. ಈ ರೀತಿ ಉಳಿದುಕೊಳ್ಳುವ ಯಾವುದೇ ಅಧಿಕಾರಿ / ಸಿಬ್ಬಂದಿಗಳು ಕೇಂದ್ರ ಕಛೇರಿಯ ಸಿಬ್ಬಂದಿ ಶಾಖೆಗೆ ಅರ್ಜಿ ಸಲ್ಲಿಸಿ ಪರವಾನಿಗೆ ಪಡೆಯುವುದು ಕಡ್ಡಾಯವಾಗಿರುತ್ತದೆ
- ಹವಾ ನಿಯಂತ್ರಿತ (Suite No-2,3) ಕೊಠಡಿಗಳನ್ನು ಮೊದಲ ಆದ್ಯತೆ ಮೇರೆಗೆ ಮಹಿಳಾ ಅಧಿಕಾರಿಗಳಿಗೆ ನೀಡುವುದು ಹಾಗೂ ಮಹಿಳಾ ಅಧಿಕಾರಿಗಳು ಇಲ್ಲದೇ ಇದ್ದಲ್ಲಿ ಬೇಡಿಕೆಯನುಸಾರ ಇತರೆ ಅಧಿಕಾರಿಗಳಿಗೆ ನೀಡುವುದು.
- ಒಂದು ತಿಂಗಳ ವಾಸ್ತವ್ಯದ ನಂತರ ಅತಿಥಿಗೃಹದಲ್ಲಿ ವಾಸ್ತವ್ಯವನ್ನು ಮುಂದುವರೆಸಿದಲ್ಲಿ ಕಡ್ಡಾಯವಾಗಿ ತಿಂಗಳ ಬಾಡಿಗೆ ಆಧಾರದ ಮೇಲೆ ವಾಸ್ತವ್ಯ ಮಾಡಬೇಕಾಗಿರುತ್ತದೆ.
- ಹವಾ ನಿಯಂತ್ರಿತ ಹಾಗೂ ಹೆಚ್ಚುವರಿ ಕೊಠಡಿ Suite No-1 ನ್ನು ಹಿರಿಯ ಶ್ರೇಣಿಯ / ಅಖಿಲ ಭಾರತ ಸೇವೆಯ ಅಧಿಕಾರಿಗಳಿಗೆ ಮಾತ್ರ ನೀಡಲಾಗುವುದು.
- ಅತಿಥಿಗೃಹದ ಕೊಠಡಿಗಳಲ್ಲಿ ವಾಸಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಕೊಠಡಿಗಳ ಕೀಲಿಗಳನ್ನು ಕಡ್ಡಾಯವಾಗಿ ಅತಿಥಿಗೃಹದ ಕೇರ್ ಟೇಕರ್-ಕಂ-ಕುಕ್ ರವರಿಗೆ ಹಸ್ತಾಂತರಿಸುವುದು.
- ಸರ್ಕಾರದ ಅಧಿಕಾರಿಗಳು / ಖಾಸಗಿ ವ್ಯಕ್ತಿಗಳು / ನಿವೃತ್ತ ನೌಕರರು ಅತಿಥಿಗೃಹದ ಕೊಠಡಿಗಳಲ್ಲಿ ಒಂದು ದಿನಕ್ಕಿಂತ ಹೆಚ್ಚಿನ ಅವಧಿಗೆ ಉಳಿದುಕೊಳ್ಳುವುದಿದ್ದಲ್ಲಿ ಸಿಬ್ಬಂದಿ ಶಾಖೆಗೆ ಅರ್ಜಿ ಸಲ್ಲಿಸಿ ಪರವಾನಿಗೆ ಪಡೆಯುವುದು ಕಡ್ಡಾಯವಾಗಿರುತ್ತದೆ.
- ಒಂದು ಕೊಠಡಿಯನ್ನು ಒಬ್ಬರಿಗಿಂತ ಹೆಚ್ಚು ಅಧಿಕಾರಿ/ಸಿಬ್ಬಂದಿಗಳಿಗೆ ಹಂಚಿಕೆ ಮಾಡಿದಲ್ಲಿ ಒಬ್ಬರಿಗೆ ನಿಗದಿಪಡಿಸಲಾದ ದರವನ್ನು ಸದರಿ ಕೊಠಡಿಗಳಲ್ಲಿ ವಾಸಿಸುವ ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಪಾವತಿಸಬೇಕಾಗುತ್ತದೆ.
- ಒಂದು ವೇಳೆ ಯಾವುದೇ ಅಧಿಕಾರಿ / ಸಿಬ್ಬಂದಿ ರಾತ್ರಿ ವೇಳೆ ವಾಸ್ತವ್ಯ ಮಾಡದೇ ಕೇವಲ ಒಂದು ದಿವಸ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇದ್ದಲ್ಲಿ ಮಾತ್ರ Suite No-2,3 ಕೊಠಡಿಗಳಿಗೆ ರೂ.100/- ಹಾಗೂ Annexure (A/C) ಕೊಠಡಿಗಳಿಗೆ ರೂ.75/- ಹಾಗೂ ಸಾಮಾನ್ಯ ಕೊಠಡಿ 4,5 ಗಳಿಗೆ ರೂ.50/- ಪಾವತಿಸುವುದು.

ಈ ಪರಿಷ್ಕೃತ ದರವು ಮತ್ತು ಸೂಚನೆಗಳು ದಿನಾಂಕ:01/11/2022 ರಿಂದ ಜಾರಿಗೆ ಬರುತ್ತದೆ.

Signed by Bharath S

Date: 18-10-2022 20:38:35

ವ್ಯವಸ್ಥಾಪಕ ನಿರ್ದೇಶಕರು

C:\My Documents\A2\Guest House office order.doc

/26293/2022

<u>ಪ್ರತಿಯನ್ನು ಆ ಪೂಃ</u>

- ಎಲ್ಲ ಇಲಾಖಾ ಮುಖ್ಯಸ್ಥರುಗಳಿಗೆ, ವಾಕರಸಾಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ
- ಎಲ್ಲ ವಿಭಾಗೀಯ ನಿಯಂತ್ರಣಾಧಿಕಾರಿಗಳು / ಕಾರ್ಯ ವ್ಯವಸ್ಥಾಪಕರು, ಪ್ರಾದೇಶಿಕ ಕಾರ್ಯಾಗಾರ, ಹುಬ್ಬಳ್ಳಿ / ಪ್ರಾಂಶುಪಾಲರು, ಪ್ರಾದೇಶಿಕ ತರಬೇತಿ ಕೇಂದ್ರ, ಹುಬ್ಬಳ್ಳಿ / ಕಾರ್ಯನಿರ್ವಾಹಕ ಅಭಿಯಂತರರು, ಬೆಳಗಾವಿ ವಿಭಾಗ ರವರ ಮಾಹಿತಿಗೆ.
- ವಿಭಾಗೀಯ ನಿಯಂತ್ರಣಾಧಿಕಾರಿ, ಬೆಳಗಾವಿ ರವರ ಮಾಹಿತಿಗೆ ಹಾಗೂ ಸುತ್ತೋಲೆ ಸ್ವೀಕೃತಿ, ಅನುಷ್ಠಾನ ವರದಿ ರವಾನಿಸಲು ತಿಳಿಸಿದೆ.
- ಮುಖ್ಯ ಗಣಕ ವ್ಯವಸ್ಥಾಪಕರು, ವಾಕರಸಾ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸುತ್ತೋಲೆಯನ್ನು ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

<u>ಪ್ರತಿಯನ್ನು ಃ</u>

- ಮಾನ್ಯ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿ / ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ ಕಳುಹಿಸಿದೆ.
- ಕೇರ್ ಟೇಕರ್ ಕಂ ಕುಕ್, ವಾ ಕ ರ ಸಾ ಸಂಸ್ಥೆ ಅತಿಥಿ ಗೃಹ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.